ಆಯುಕ್ತರು (ಮಾಹಿತಿ ತಂತ್ರಜ್ಞಾನ) ರವರ ಕಛೇರಿ
PR/462/21-22
ದಿನಾಂಕ 28/03/2022
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನ.ರಾ. ಚೌಕ, ಬೆಂಗಳೂರು

ಸಂಖ್ಯೆ: 2357/21-22
ದಿನಾಂಕ: 25/03/2022

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಶೇಷ ಆಯುಕ್ತರು (ಹಣಕಾಸು) ರವರಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–560 002**

ಸಂ:ವಿ.ಆ(ಹ)/ಪಿಆರ್/2140/2021–22 ದಿನಾಂಕ:23–03–2022

DC(IT) Vacant FDA IT Advisor

## ಸುತ್ತೋಲೆ

ವಿಷಯ: ವಲಯ ಉಪ ನಿಯಂತ್ರಕರು (ಹಣಕಾಸು) ರವರ ಕಛೇರಿಗಳಲ್ಲಿ ಬಾಕಿಯಿರುವ ಡಿ.ಸಿ. ಬಿಲ್ಲುಗಳನ್ನು ಪಾವತಿಸುವ ಬಗ್ಗೆ.

ಉಲ್ಲೇಖ: ಸಂ:ವಿ.ಆ(ಹ)/ಪಿಆರ್/2045/21–22, ದಿನಾಂಕ:18–02–2022.

~*~~

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ಉಪ ನಿಯಂತ್ರಕರು (ಹಣಕಾಸು) ರವರ ಕಛೇರಿಯಲ್ಲಿ 2020–21 ಮತ್ತು 2021–22ನೇ ಸಾಲಿನಲ್ಲಿ ಬಾಕಿಯಿರುವ ಎಲ್ಲಾ ಡಿ.ಸಿ.ಬಿಲ್ಲುಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಲಾಗಿ ಕೆಲವು ವಲಯಗಳ ಕಛೇರಿಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ ಉಲ್ಲಂಘಿಸಿ ಡಿ.ಸಿ ಬಿಲ್ಲುಗಳನ್ನು ತಯಾರಿಸಿರುವುದು ಹಾಗೂ ಅವುಗಳ ಪಾವತಿಗೆ ಉಪ ನಿಯಂತ್ರಕರು (ಹಣಕಾಸು) ಕಛೇರಿಗೆ ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಉಪ ನಿಯಂತ್ರಕರು (ಹಣಕಾಸು) ಕಛೇರಿಗಳಿಗೆ ಸಲ್ಲಿಕೆಯಾಗಿರುವ ಎಲ್ಲಾ ಡಿ.ಸಿ. ಬಿಲ್ಲುಗಳನ್ನು (essential) ಈ ಕೆಳಕಂಡ ಷರತ್ತುಗೊಳಪಡಿಸಿ ಪಾವತಿಸಲು ಎಲ್ಲಾ ಉಪ ನಿಯಂತ್ರಕರು (ಹಣಕಾಸು) ರವರುಗಳಿಗೆ ಸೂಚಿಸಿದೆ.

**ಷರತ್ತುಗಳು:**

1. 2020–21 ಮತ್ತು 2021–22ನೇ ಸಾಲಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ ಉಲ್ಲಂಘಿಸಿ ಪಾವತಿಗೆ ಸಲ್ಲಿಸಿರುವ ಡಿ.ಸಿ. ಬಿಲ್ಲುಗಳನ್ನು ಪಾವತಿಸುವಂತಿಲ್ಲ.
2. ಪಿ–0277ರಡಿ ಖರೀದಿಸಿರುವ ಸಲಕರಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಿಲ್ಲುಗಳನ್ನು ಪಾವತಿಸುವಂತಿಲ್ಲ.
3. ಪಿ–0086 ರಡಿಯಲ್ಲಿ ಬೊಮ್ಮನಹಳ್ಳಿ ವಲಯಕ್ಕೆ ಅನ್ವಯವಾಗುವಂತೆ ಯಾವುದೇ ಡಿ.ಸಿ. ಬಿಲ್ಲನ್ನು ಪಾವತಿ ಮಾಡುವಂತಿಲ್ಲ.
4. ಎಲ್ಲಾ ವಲಯಗಳು ಸಲ್ಲಿಸಿರುವ ಪಟ್ಟಿಗಳಲ್ಲಿ ಸಿಬ್ಬಂದಿ ವೇತನ ಹಾಗೂ ಹೊರಗುತ್ತಿಗೆ ನೌಕರರ ವೇತನಕ್ಕೆ ಸಂಬಂಧಪಟ್ಟ ಬಿಲ್ಲುಗಳು ಬಾಕಿಯಿರುವುದು ಕಂಡುಬಂದಿದ್ದು, ಸದರಿ ಬಿಲ್ಲುಗಳು ಅತ್ಯಾವಶ್ಯಕ ಬಿಲ್ಲುಗಳಾಗಿರುವುದರಿಂದ ಈ ಕೂಡಲೇ ಪಾವತಿಗೆ ಕ್ರಮವಹಿಸುವುದು ಹಾಗೂ ಇಂತಹ ಬಿಲ್ಲುಗಳನ್ನು ಆಯಾಯ ಮಾಹೆಗಳಲ್ಲೇ ಪಾವತಿಸಲು ಕ್ರಮವಹಿಸುವುದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು/ ವಲಯಗಳ ಉಪ ನಿಯಂತ್ರಕರು (ಹಣಕಾಸು) ರವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
5. ಎಲ್ಲಾ ವಲಯಗಳು ಸಲ್ಲಿಸಿರುವ ಪಟ್ಟಿಗಳಲ್ಲಿನ 2020–21ನೇ ಸಾಲಿನಲ್ಲಿ ಬಾಕಿಯಿರುವ ಎಲ್ಲಾ ಬಿಲ್ಲುಗಳನ್ನು (ಮೇಲ್ಕಂಡ 1 ರಿಂದ 3ರ ಷರತ್ತುಗಳ ಅಡಿಯಲ್ಲಿ ಬರುವ ಬಿಲ್ಲುಗಳನ್ನು ಹೊರತುಪಡಿಸಿ) ದಿನಾಂಕ: 31-03–2022ರೊಳಗಾಗಿ ಪಾವತಿಸಲು ಕ್ರಮವಹಿಸುವುದು. ಸದರಿ ಬಿಲ್ಲುಗಳನ್ನು 2022–23ನೇ ಸಾಲಿನಲ್ಲಿ ಪಾವತಿಸಲು ಅವಕಾಶವಿರುವುದಿಲ್ಲ.

24/3/22

ವಿಶೇಷ ಆಯುಕ್ತರು (ಹಣಕಾಸು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

1. ಮಾನ್ಯ ಮುಖ್ಯಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಎಲ್ಲಾ ವಲಯಗಳ ಆಯುಕ್ತರು ಹಾಗೂ ಜಂಟಿ ಆಯುಕ್ತರು ರವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು (ಹಣಕಾಸು) ರವರಿಗೆ ಮಾಹಿತಿಗಾಗಿ.
4. ಮುಖ್ಯಲೆಕ್ಕಾಧಿಕಾರಿಗಳು ರವರಿಗೆ ಅಗತ್ಯ ಕ್ರಮಕ್ಕಾಗಿ.
5. ಉಪ ನಿಯಂತ್ರಕರು (ಹಣಕಾಸು) ಕೇಂದ್ರ, ಪೂರ್ವ, ಪಶ್ಚಿಮ, ದಕ್ಷಿಣ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಯಲಹಂಕ, ದಾಸರಹಳ್ಳಿ ವಲಯರವರುಗಳ ಸೂಕ್ತ ಕ್ರಮಕ್ಕಾಗಿ.
6. ಪಾಲಿಕೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

328
28/3/22

CO1
28/03